C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 167/2020

**ಚಾ.ಸಾ.–13 ಫ್ರಾ.ಸಾ.–05**

| | |
|---|---|
| **ಸಾಕ್ಷಿದಾರರ ಹೆಸರು** | **ಶಿವಕುಮಾರ್** |
| **ತಂದೆಯ ಹೆಸರು** | **ಲೇಟ್ ಎಸ್.ಕೆ. ಕೃಷ್ಣಯ್ಯ** |
| **ವಯಸ್ಸು** | **53 ವರ್ಷಗಳು** |
| **ಉದ್ಯೋಗ** | **ಎ.ಎಸ್.ಐ. ಕೊಪ್ಪ ಪೋಲೀಸ್ ಠಾಣೆ** |
| **ವಾಸ** | **ಕೊಪ್ಪ** |

**ದಿನಾಂಕಃ 18.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು 2017 ರಿಂದ 2022 ರವರಗೆ ಬೆಳಕವಾಡಿ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ26.08.2019 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ರಾತ್ರಿ 11.00 ಗಂಟೆಗೆ ಚಾಸಾ- 21 ರವರು ಮುಟ್ಟನಹಳ್ಳಿಯ ಕಾಲೋನಿಯಲ್ಲಿ ಗಲಾಟೆ ನಡೆಯುತ್ತಿದೆ ವಿಚಾರಿಸಬೇಕು ಎಂದು ಹೇಳಿ ನನ್ನನ್ನು ಹಾಗೂ ಹೋಂ ಗಾರ್ಡ್ ಆಗಿದ್ದ ಸಿದ್ದ ಎನ್ನುವವರನ್ನು ಕಳುಹಿಸಿದ್ದರು. ಅದರಂತೆ ನಾನು ಮತ್ತು ಹೋಂ ಗಾರ್ಡ್ ಆಗಿದ್ದ ಸಿದ್ದ ಹೋಂ ಗಾರ್ಡ್ ಸಿದ್ದ ಚಾಸಾ- 14 ರವರು ರಾತ್ರಿ 11.45 ಗಂಟೆಗೆ ಮುಟ್ಟನಹಳ್ಳಿ ಗ್ರಾಮದ ಕಾಲೋನಿಯಲ್ಲಿರುವ ಪಿರ್ಯಾದಿ ಪುಟ್ಟಸಿದ್ದಮ್ಮರವರ ಮನೆಯ ಹತ್ತಿರ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ 5 ಜನರು ಹುಡುಗರು ಇದ್ದರು. ನಮ್ಮನ್ನು ನೋಡಿ 5 ಜನರು ಪ್ಯಾಸೆಂಜರ್ ಆಟೋ ಹತ್ತಿ ಹೊರಟುಹೋದರು. ಆಟೋದ ನೊಂದಣಿ ಸಂಖ್ಯೆ ನನಗೆ ನೆನಪಿಲ್ಲ.

ನಂತರ ನಾವು ಅವರನ್ನು ಹಿಡಿಯಲು ಪ್ರಯತ್ನ ಮಾಡಿದೆವು ಆದರೆ ಅವರು ಸಿಗಲಿಲ್ಲ. ನಾವು ಚಾಸಾ- 1 ರವರ ಮನೆಗೆ ಬಂದು ಏನಾಯಿತು ಎಂದು ಚಾಸಾ- 1 ಮತ್ತು 2 ರವರನ್ನು ಕೇಳಿದಾಗ ಚಾಸಾ-2 ರವರು 1ನೇ ಆರೋಪಿ ರೂ.10,000/- ಹಣವನ್ನು ಅವರಿಂದ ಪಡೆದುಕೊಂಡಿದ್ದು ಅದನ್ನು ವಾಪಸ್ಸು ಕೇಳಿದಾಗ ಆ ವಿಚಾರದಲ್ಲಿ ಮನೆಯಲ್ಲಿ ಬಂದು ಗಲಾಟೆ ಮಾಡಿರುತ್ತಾರೆ ಎಂದು ಹೇಳಿದರು. ಈ ವಿಷಯವನ್ನು ಠಾಣೆಗೆ ವಾಪಸ್ಸು ಬಂದು ತನಿಖಾಧಿಕಾರಿಗಳ ಮುಂದೆ ವರದಿ ಮಾಡಿರುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ಸಹಾ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಡಿ.ಎಂ. ವಕೀಲರಿಂದ**

3. ಠಾಣೆಯಲ್ಲಿ ನನಗೆ ಯಾವುದೇ ಫೋನ್ ಕರೆ ಬಂದಿರುವುದಿಲ್ಲ. ನಮ್ಮ ಠಾಣೆಗೆ ವೈರ್ ಲೆಸ್ ಮೂಲಕ ಅಥವಾ ಫೋನ್ ಮೂಲಕ ಬರುವ ಮಾಹಿತಿಯನ್ನು ಠಾಣೆಯಲ್ಲಿ ಇರುವ ವಹಿಯಲ್ಲಿ ದಾಖಲಿಸಿಕೊಳ್ಳುತ್ತೇವೆ. ಠಾಣಾಧಿಕಾರಿಗಳು ಸದರಿ ವಹಿಯನ್ನು ನಿರ್ವಹಿಸುವ ಕೆಲಸ ಇರುತ್ತದೆ. ಪಿರ್ಯಾದಿಯಿಂದ ನಮ್ಮ ಠಾಣೆಗೆ ಯಾವುದೇ ಟೆಲಿಫೋನ್ ಕರೆ ಬಂದಿರುವುದಿಲ್ಲ. ಬೆಳಕವಾಡಿ ಪೋಲೀಸ್ ಠಾಣೆಯಿಂದ ಕೃತ್ಯ ನಡೆದಿದೆ ಎನ್ನುವ ಸ್ಥಳ ಸುಮಾರು 5 ಕಿಮಿ ದೂರ ಇದೆ. ನಾನು ಹಾಗೂ ಹೋಂ ಗಾರ್ಡ್ ಟಿವಿಎಸ್ ಸ್ಟಾರ್ ಮೋಟಾರ್ ಸೈಕಲಿನಲ್ಲಿ ಹೋಗಿರುತ್ತೇವೆ. ನಾವು ಠಾಣೆಯಿಂದ ಹೊರಟಾಗ ಸಮಯ ರಾತ್ರಿ 11.45 ಆಗಿತ್ತು. ಸ್ಥಳಕ್ಕೆ ನಾವು 12.15 ಗಂಟೆಗೆ ತಲುಪಿರುತ್ತೇವೆ. ಠಾಣೆಯಿಂದ ಹೊರಡುವ ಪೂರ್ವದಲ್ಲಿ ಸ್ಥಳಕ್ಕೆ ಹೋಗುವ ಬಗ್ಗೆ ಠಾಣೆಯಲ್ಲಿರುವ ಚಲನವಲನ ವಹಿಯಲ್ಲಿ ನಮೂದು ಮಾಡಿರುವುದಿಲ್ಲ. ನಾವು ಸ್ಥಳಕ್ಕೆ ತಲುಪಿದ ರಾತ್ರಿ 12.15 ಗಂಟೆಯ ಸಮಯದಲ್ಲಿ ಸ್ಥಳದಲ್ಲಿ ಸುಮಾರು 20 - 30 ಜನರು ಸೇರಿದ್ದರು. ಆರೋಪಿತರು ಆ ಸಮಯ ಧರಿಸಿದ್ದರು ಎನ್ನುವ ಬಟ್ಟೆಯ ಬಣ್ಣ ಹೇಳಲು ಬರುವುದಿಲ್ಲ. ನಮ್ಮನ್ನು ನೋಡಿ ಆರೋಪಿತರು ಓಡಿ ಹೋಗಿರುವ ಬಗ್ಗೆ ನಾವು ಠಾಣೆಗೆ ಅಲ್ಲಿಂದ ಯಾವುದೇ ಸಂದೇಶವನ್ನು ಕಳುಹಿಸಿರುವುದಿಲ್ಲ. ನಮ್ಮ ಠಾಣೆಗೆ ಸಿಬ್ಬಂದಿಗಳನ್ನು ಕಳುಹಿಸಿಕೊಡಿ ಎಂದು ಅಲ್ಲಿಂದ ಮೋಬೈಲ್ ಫೋನ್ ಮೂಲಕ

ಠಾಣಾಧಿಕಾರಿಗಳಿಗೆ ಕರೆ ಮಾಡಿ ತಿಳಿಸಿರುತ್ತೇನೆ. ಆದರೆ ಸಿಬ್ಬಂದಿಗಳು ಯಾರು ಅಲ್ಲಿಗೆ ಬರಲಿಲ್ಲ.

4. ಪಿರ್ಯಾದುದಾರರ ಮನೆಯು ಸುತ್ತಾ ಮುತ್ತಾ ಮನೆಗಳು ಇರುವಂತಹ ಜಾಗ ಆಗಿರುತ್ತದೆ. ಅಲ್ಲಿ ನೆರೆದಿದ್ದ 20 – 30 ಜನರಲ್ಲಿಯೂ ಸಹಾ ಆರೋಪಿತರನ್ನು ಹಿಡಿದುಕೊಳ್ಳಲು ಸಹಾಯ ಮಾಡಿ ಎಂದು ನಾವು ಕೇಳಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಹೋಂ ಗಾರ್ಡ್ ಚಾಸಾ- 14 ರವರು ಸ್ಥಳಕ್ಕೆ ಹೋಗಿರುವುದೇ ಇಲ್ಲ ಎಂದರೆ ಸರಿಯಲ್ಲ. ಚಾಸಾ- 1 ಅಥವಾ ಚಾಸಾ- 2 ರವರ ಹೇಳಿಕೆಗಳನ್ನು ನಾವು ಆ ಸಮಯ ಪಡೆದಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ- 1 ಮತ್ತು 2 ರವರ ಒತ್ತಡಕ್ಕೆ ಮಣಿದು ಸುಳ್ಳು ದೂರನ್ನು ದಾಖಲಿಸಿದ್ದು ಅದರ ಆಧಾರದ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**

**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**

**ನ್ಯಾಯಾಲಯ, ಮಂಡ್ಯ**